**5 ನೇ ಭಾರತ - ವೆನಿಜುಯೆಲಾ ವಿದೇಶಾಂಗ ಕಚೇರಿ ಸಮಾಲೋಚನೆಗಳು (ನವೆಂಬರ್ 26, 2025)**

ನವೆಂಬರ್ 26, 2025

5 ನೇ ಭಾರತ-ವೆನಿಜುಯೆಲಾ ವಿದೇಶಾಂಗ ಕಚೇರಿ ಸಮಾಲೋಚನೆಗಳು (FOC) ಇಂದು ನಡೆಯಿತು. ಇದರ ಅಧ್ಯಕ್ಷತೆಯನ್ನು ಭಾರತ ಸರ್ಕಾರದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ (ಪೂರ್ವ) ಶ್ರೀ ಪಿ. ಕುಮಾರನ್ ಮತ್ತು ಬೊಲಿವೇರಿಯನ್ ಗಣರಾಜ್ಯ ವೆನೆಜುಯೆಲಾದ ವಿದೇಶಾಂಗ ವ್ಯವಹಾರಗಳ ಉಪ-ಸಚಿವೆ ಮಿಸ್ ಟಟಿಯಾನಾ ಜೋಸೆಫಿನಾ ಪುಗ್ ಮೊರೆನೊ ಅವರು ಜಂಟಿಯಾಗಿ ವಹಿಸಿಕೊಂಡಿದ್ದರು.

2. ವ್ಯಾಪಾರ, ಆರೋಗ್ಯ ಮತ್ತು ಔಷಧಗಳು, ಡಿಜಿಟಲ್ ತಂತ್ರಜ್ಞಾನ, ಕೃಷಿ, ಅಭಿವೃದ್ಧಿ ಪಾಲುದಾರಿಕೆ, ಸಂಸ್ಕೃತಿ ಮತ್ತು ಜನರ ನಡುವಿನ ವಿನಿಮಯ ಸೇರಿದಂತೆ ಪ್ರಮುಖ ಕ್ಷೇತ್ರಗಳಲ್ಲಿ ಸಹಕಾರವನ್ನು ಬಲಪಡಿಸಲು ಎರಡೂ ಕಡೆಯವರು ಒಪ್ಪಿಕೊಂಡರು. ಪರಸ್ಪರ ಹಿತಾಸಕ್ತಿಯ ಬಹುಪಕ್ಷೀಯ ವೇದಿಕೆಗಳಲ್ಲಿ ಸಹಯೋಗವನ್ನು ಹೆಚ್ಚಿಸುವ ತಮ್ಮ ಬದ್ಧತೆಯನ್ನು ಅವರು ಪುನರುಚ್ಚರಿಸಿದರು.

3. ಎರಡೂ ಕಡೆಯವರು ಪ್ರಾದೇಶಿಕ ಮತ್ತು ಅಂತಾರಾಷ್ಟ್ರೀಯ ಬೆಳವಣಿಗೆಗಳ ಬಗ್ಗೆ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು ಮತ್ತು ಭಾರತ - ವೆನಿಜುಯೆಲಾ ಪಾಲುದಾರಿಕೆಯನ್ನು ಮುಂದಕ್ಕೆ ತೆಗೆದುಕೊಂಡು ಹೋಗಲು ಬಹುಪಕ್ಷೀಯ ವೇದಿಕೆಯಲ್ಲಿ ನಿಕಟವಾಗಿ ಸಮನ್ವಯ ಸಾಧಿಸಲು ಒಪ್ಪಿಕೊಂಡರು.

4. ಮುಂದಿನ ಸುತ್ತಿನ FOC ಯನ್ನು ಪರಸ್ಪರ ಅನುಕೂಲಕರ ದಿನಾಂಕದಂದು ಕರಾಕಾಸ್‌ನಲ್ಲಿ ನಡೆಸಲು ಒಪ್ಪಿಕೊಳ್ಳಲಾಯಿತು.

ನವದೆಹಲಿ

ನವೆಂಬರ್ 26, 2025